- ಕಿಶೋರಿಯರಿಗೆ ಅಪೌಷ್ಟಿಕತೆಯ ಕಾರಣಗಳ ಬಗ್ಗೆ, ಆರೋಗ್ಯ, ವೈಯಕ್ತಿಕ ಸ್ವಚ್ಛತೆ ಹಾಗೂ ಪೌಷ್ಟಿಕ ಆಹಾರ ಸೇವನೆಯ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಲು ಶಾಲಾ-ಕಾಲೇಜ್‌ಗಳಲ್ಲಿ ಕನಿಷ್ಠ ಒಬ್ಬ ಶಿಕ್ಷಕಿಯನ್ನು ಗುರುತಿಸಿ ತರಬೇತಿ ನೀಡತಕ್ಕದ್ದು.
- ವೃತ್ತಪತ್ರಿಕೆ ಪ್ರಕಟಣೆಗಳು, ಫಲಕಗಳು, ರೇಡಿಯೋ/ ಎಫ್.ಎಂ. ರೇಡಿಯೋ, ದೂರದರ್ಶನ ಹಾಗೂ ಜಾಹೀರಾತುಗಳ ಮೂಲಕ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಗಳಡಿ ಸಿಗುವ ಸೇವೆಗಳ ಬಗ್ಗೆ ವ್ಯಾಪಕ ಪ್ರಚಾರವನ್ನು ಮಾಡಬೇಕು.
- ಸಾರ್ವಜನಿಕ ಕಾರ್ಯಕ್ರಮಗಳು, ಗ್ರಾಮ ಸಭೆಗಳನ್ನು ನಡೆಸುವುದು, ಬೀದಿ ನಾಟಕಗಳನ್ನು ಆಡುವುದು, ಸಾಮುದಾಯಿಕ ವಿಡಿಯೋ ಪ್ರದರ್ಶನ ಮತ್ತು ಸಾಮುದಾಯಿಕ ಕೇಬಲ್ ಟಿ.ವಿ. ಇವುಗಳ ಮೂಲಕ ಅರಿವು ಮೂಡಿಸುವುದು.
- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಮೂಲಕ ಆರೋಗ್ಯ, ಸ್ವಚ್ಛತೆ, ಅಪೌಷ್ಟಿಕತೆಗೆ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು.

## 4. ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳು



- ಸ್ವಚ್ಛ ಹಾಗೂ ಬಿಸಿಯಾದ ಕುಡಿಯುವ ನೀರಿನ ಸರಬರಾಜು.
- ವಿದ್ಯುತ್ ಸಂಪರ್ಕ – ಸಾಕಷ್ಟು ದೀಪಗಳು ಮತ್ತು ಫ್ಯಾನ್‌ಗಳ ಅಳವಡಿಕೆ.
- ಮಕ್ಕಳಿಗೆ ಹೊಂದುವಂತಹ ಅನುಕೂಲಕರವಾಗಿರುವ ಶೌಚಾಲಯಗಳು.
- ಮಕ್ಕಳ ತೂಕದ ಯಂತ್ರಗಳು.
- ಗ್ಯಾಸ್ ಸ್ಟವ್ ಮತ್ತು ಅಡಿಗೆ ಅನಿಲ ಪೂರೈಕೆ.
- ಅಗತ್ಯವಿರುವ ಪಾತ್ರೆಗಳು – ದಿನಸಿ ಪದಾರ್ಥಗಳು, ಆಹಾರ ಧಾನ್ಯಗಳು ಮತ್ತು ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಇಡಲು ಅಗತ್ಯವಾದ ಒಳ್ಳೆಯ ಗುಣಮಟ್ಟದ ಪಾತ್ರೆಗಳು.
- ಅಗತ್ಯ ಸಂಖ್ಯೆಯ ಚಾಪೆಗಳು.
- ಬಾಡಿಗೆ ಕಟ್ಟಡ ಅಥವಾ ಇನ್ಯಾವುದೇ ರೀತಿಯ ಕಟ್ಟಡ ಅಥವಾ ಮರದ ನೆರಳಿನಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಸಮೀಪದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ, ಉನ್ನತ ಪ್ರಾಥಮಿಕ ಶಾಲೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡದಲ್ಲಿ ಲಭ್ಯವಿರುವ ಜಾಗಕ್ಕೆ ಸ್ಥಳಾಂತರಿಸತಕ್ಕದ್ದು.
- ಸಮಯಕ್ಕೆ ಸರಿಯಾಗಿ ಔಷಧಿ ಕಿಟ್‌ಗಳ ಸರಬರಾಜು.
- ವೈದ್ಯರಿಂದ ನಿಯಮಿತ ಆರೋಗ್ಯ ತಪಾಸಣೆ.
- ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಿಗೆ ಅಗತ್ಯವಾದ ಸಲಕರಣೆಗಳ ಸರಬರಾಜು.
- ಬಾಲ ವಿಕಾಸ ಸಮಿತಿ, ಗ್ರಾಮ ಆರೋಗ್ಯ ಪೌಷ್ಟಿಕ ಆಹಾರ ಮತ್ತು ನೈರ್ಮಲ್ಯ ಸಮಿತಿಗಳನ್ನು ಬಲಪಡಿಸಿ ಇವುಗಳಿಂದ ಸಮರ್ಥವಾಗಿ ಮೇಲ್ವಿಚಾರಣೆಯಾಗುವಂತೆ ಮಾಡುವುದು.

## 5. ಸಿಬ್ಬಂದಿಗೆ ಸಂಬಂಧಿಸಿದ ಶಿಫಾರಸ್ಸುಗಳು :

- ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಹುದ್ದೆಗಳನ್ನು ನಿಯಮಾನುಸಾರ ಭರ್ತಿಮಾಡುವ ಜವಾಬ್ದಾರಿ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ.
- ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸೇವೆಯನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಳ್ಳದಂತೆ ನಿರ್ದೇಶನ.
- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಲ್ಲಿಸಿದ ಸೇವೆಗೆ ಗೌರವಧನವನ್ನು ವಿಳಂಬ ಮಾಡದೆ ಪಾವತಿಸುವಂತೆ ನಿರ್ದೇಶನ.
- ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತೆಯರಿಗೆ ಸೂಕ್ತ ತರಬೇತಿ.



## 6. ಇತರೆ ಶಿಫಾರಸ್ಸುಗಳು:

ಐ.ಸಿ.ಡಿ.ಎಸ್. ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಯಾವುದೇ ಲೋಪ ಉಂಟಾದಲ್ಲಿ ಜಿಲ್ಲಾಧಿಕಾರಿಗಳು, ಸಿ.ಇ.ಓ.(ಜಿ.ಪಂ.) ಡಿ.ಹೆಚ್.ಓ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಜಂಟಿಯಾಗಿ ಹೊಣೆ.

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಅಪೌಷ್ಟಿಕತೆಯನ್ನು ತಡೆಗಟ್ಟಲು ವರದಿ ನೀಡಿರುವ ಸನ್ಮಾನ್ಯ ಶ್ರೀ ನ್ಯಾಯಮೂರ್ತಿ ಎನ್.ಕೆ. ಪಾಟೀಲ್‌ರವರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾಗಿರುತ್ತಾರೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು 2014–15 ರ ಯೋಜನೆಯಾಗಿ "ಅಪೌಷ್ಟಿಕತೆಯ ನಿರ್ಮೂಲನೆ ಮತ್ತು ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಯೋಜನೆ" ಯನ್ನು ಹಮ್ಮಿಕೊಂಡಿದೆ ಹಾಗೂ ಮಾನ್ಯ ಕೇಂದ್ರ ಸರ್ಕಾರವು ಸೆಪ್ಟೆಂಬರ್ 01 ರಿಂದ 7ನ್ನು ರಾಷ್ಟ್ರೀಯ ಪೌಷ್ಟಿಕತಾ ಸಪ್ತಾಹವನ್ನಾಗಿ ಆಚರಿಸಲು ನಿರ್ಧರಿಸಿದೆ.

"ಮಕ್ಕಳು ಮಾನವ ಕುಲಕ್ಕೆ ದೇವರು ನೀಡಿದ ಅತ್ಯಂತ ದೊಡ್ಡ ಕೊಡುಗೆ, ಈ ಅತ್ಯಮೂಲ್ಯ ಆಸ್ತಿಯ ಸಂರಕ್ಷಣೆ ಮತ್ತು ಅಭಿವೃದ್ಧಿ ನಮ್ಮ ನಿಮ್ಮೆಲ್ಲರ ಹೊಣೆ"

ನ್ಯಾಯಮೂರ್ತಿ ಎನ್.ಕೆ. ಪಾಟೀಲ್.

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ:**

**1800-425-90900**


ಪ್ರಕಟಣೆ:

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಮೊದಲನೇ ಮಹಡಿ, ಹೆಚ್.ಸಿದ್ಧಯ್ಯ ರಸ್ತೆ, ಬೆಂಗಳೂರು – 560 027.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಕಚೇರಿ ದೂರವಾಣಿ ಸಂಖ್ಯೆ: 080-22111875/22111729 ಫ್ಯಾಕ್ಸ್:080-22112935

ಇಮೇಲ್ ವಿಳಾಸ: karslsa@gmail.com


# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

# ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಅಪೌಷ್ಟಿಕತೆಯನ್ನು ತಡೆಗಟ್ಟುವುದರ ಬಗೆಗಿನ ಮಾಹಿತಿ



## ಸಮಿತಿಯ ಹಿನ್ನೆಲೆ :

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮರಕಲದಿನ್ನಿ ಗ್ರಾಮ ಮತ್ತು ಇತರ ಸ್ಥಳಗಳಲ್ಲಿ ಮಕ್ಕಳು ಹಸಿವಿನಿಂದ ಬಳಲುತ್ತಿರುವುದರ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಗಮನಕ್ಕೆ ಬಂದಿದ್ದು, ಆ ವಿಷಯವನ್ನು ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯವೆಂದು ಪರಿಗಣಿಸಿದ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ38157/2011 (ಪಿ.ಐ.ಎಲ್.) ದಾಖಲಿಸಿ ಕೊಳ್ಳಲಾಯಿತು.

ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ವಿಭಾಗೀಯ ಪೀಠವು 12/04/2012ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎನ್. ಕೆ.ಪಾಟೀಲರ ಅಧ್ಯಕ್ಷತೆಯಲ್ಲಿ 9 ಜನರ ಸಮಿತಿಯ ರಚನೆ ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಸಾಯುವುದನ್ನು ತಡೆಗಟ್ಟಲು ಪರಿಹಾರೋಪಾಯಗಳನ್ನು ಸೂಚಿಸುವ ಕಾರ್ಯಯೋಜನೆಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿತ್ತು.



ಕರ್ನಾಟಕ ರಾಜ್ಯದ ಮಕ್ಕಳ ಅಪೌಷ್ಟಿಕತೆಗೆ ಸಂಬಂಧಿಸಿದಂತೆ ಪರಿಣಾಮಕಾರಿ ಅಧ್ಯಯನ ನಡೆಸಲು ಆದೇಶ ಸಂಖ್ಯೆ ಡಬ್ಲ್ಯೂ.ಸಿ.ಡಿ.303/ಐ.ಸಿ.ಡಿ/2011 (ಬಿ) ದಿನಾಂಕ: 19/04/2012ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಉಪ ಸಮಿತಿಗಳ ರಚಿಸಲಾಯಿತು.

ಮಕ್ಕಳಲ್ಲಿನ ಅಪೌಷ್ಟಿಕತೆಗಿರುವ ಕಾರಣಗಳನ್ನು ಗುರುತಿಸಲು ರಾಜ್ಯದ ನಾಲ್ಕು ವಿಭಾಗಗಳಾದ ಗುಲ್ಬರ್ಗಾ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರಿನಲ್ಲಿ ಸಮಿತಿಯ ಅಧ್ಯಕ್ಷರು ಸಭೆಗಳನ್ನು ನಡೆಸಿ ನಾಗರಿಕರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿನ ತಜ್ಞರು ಮತ್ತು ಸಂಬಂಧಪಟ್ಟವರೆಲ್ಲರೂ ತಮ್ಮ ಸಲಹೆ ಅಥವಾ ಶಿಫಾರಸ್ಸುಗಳನ್ನು ನೀಡಲು ಅವಕಾಶ ಕಲ್ಪಿಸಲಾಯಿತು. ದಿನಾಂಕ: 26/04/2012ರಂದು ಗುಲ್ಬರ್ಗಾದಲ್ಲಿ ನಡೆದ ಸಮಿತಿಯ ಪ್ರಾದೇಶಿಕ ಸಭೆಯಲ್ಲಿ ಉಚಿತ ಸಹಾಯವಾಣಿಯ ಸಂಖ್ಯೆ 1800–425–25250 ನ್ನು ಆರಂಭಿಸಲಾಯಿತು.

ಸಮಿತಿಯ ಸನ್ಮಾನ್ಯ ಅಧ್ಯಕ್ಷರು ರಾಜ್ಯದ ಹದಿನಾಲ್ಕು ಜಿಲ್ಲೆಗಳಲ್ಲಿನ 81 ಅಂಗನವಾಡಿ ಕೇಂದ್ರಗಳಿಗೆ ಹಿರಿಯ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು, ಮತ್ತಿತರರ ಜೊತೆ ಭೇಟಿ ನೀಡಿ ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕಿಯರು, ಮಕ್ಕಳು ಮತ್ತು ಅವರ ಪಾಲಕರು, ಯುವತಿಯರು, ಬಾಣಂತಿಯರು ಮತ್ತು ಸಾರ್ವಜನಿಕರ ಜೊತೆ ಚರ್ಚಿಸಿ ಅಂಗನವಾಡಿ ಕೇಂದ್ರಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡಲಾಯಿತು. ಸಮಿತಿಯ ಸನ್ಮಾನ್ಯ ಅಧ್ಯಕ್ಷರು ಭೇಟಿ ನೀಡಿದ ಎಲ್ಲಾ ಜಿಲ್ಲೆಗಳಲ್ಲೂ ಪತ್ರಿಕಾ ಗೋಷ್ಠಿಗಳನ್ನು ವ್ಯವಸ್ಥೆಗೊಳಿಸಿ ಸಾರ್ವಜನಿಕರು, ಸರ್ಕಾರೇತರ ಸಂಸ್ಥೆಗಳು ಹಾಗೂ ಪೌಷ್ಟಿಕ ತಜ್ಞರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವಂತೆ ಪ್ರಚಾರದ ಮೂಲಕ ಕೋರಲಾಗಿತ್ತು. ಪರಿಣಾಮವಾಗಿ, ಬೇರೆ ಬೇರೆ ವರ್ಗಗಳಿಂದ ಸಮಿತಿಗೆ ಲಿಖಿತ ರೂಪದಲ್ಲಿ ಮಾಹಿತಿ ಮತ್ತು ಸಲಹೆಗಳನ್ನು ಸಂಗ್ರಹಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದಾಗಿ ಬಳಲುತ್ತಿರುವುದಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕಿದ್ದ ಕಾರಣ ದಿನಾಂಕ 12/06/2012 ರಂದು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಸಮಿತಿಯಿಂದ ಮಧ್ಯಂತರ ವರದಿಯನ್ನು ಸಲ್ಲಿಸಲಾಗಿತ್ತು. ಸಮಿತಿಯು ತನ್ನ ಮಧ್ಯಂತರ ವರದಿಯಲ್ಲಿ ಮಾಡಿದ ಶಿಫಾರಸ್ಸುಗಳನ್ನು ಕರ್ನಾಟಕ ಸರ್ಕಾರವು ಸಂಪೂರ್ಣವಾಗಿ ಅಂಗೀಕರಿಸಿದೆಯೆಂದು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರಿಂದ ಉಚ್ಚ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಯಿತು.

ಮಕ್ಕಳ ಅಪೌಷ್ಟಿಕತೆಗೆ ಸಂಬಂಧಪಟ್ಟ ಸಮಸ್ಯೆಗಳ ಸಮಗ್ರ ಅಧ್ಯಯನ ನಡೆಸಿದ ಸಮಿತಿಯಿಂದ ಶಿಫಾರಸ್ಸುಗಳನ್ನೊಳಗೊಂಡ ಸಮಗ್ರ ಕಾರ್ಯಯೋಜನೆಯ ವರದಿಯನ್ನು ಆಗಸ್ಟ್ 2012 ರಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.



## ಶಿಫಾರಸ್ಸುಗಳ ಸಂಕ್ಷಿಪ್ತ ವಿವರಗಳು. . . .

### 1. ಮಕ್ಕಳ ಆರೋಗ್ಯ ತಪಾಸಣೆ ಬಗ್ಗೆ :

- 0–6 ವರ್ಷದ ಎಲ್ಲಾ ಮಕ್ಕಳಿಗೆ ತಜ್ಞರು / ವಿಶೇಷ ವೈದ್ಯರಿಂದ ಕಡ್ಡಾಯ ಆರೋಗ್ಯ ತಪಾಸಣೆ.
- ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ತಿಂಗಳಿಗೊಮ್ಮೆ ತಪ್ಪದೆ ವೈದ್ಯಾಧಿಕಾರಿಯಿಂದ ವೈದ್ಯಕೀಯ ಪರೀಕ್ಷೆ.
- ಪ್ರತಿ ಜಿಲ್ಲೆಯಲ್ಲೂ ಕನಿಷ್ಠ 20 ಹಾಸಿಗೆಗಳಿರುವ ಹಾಗೂ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಪೌಷ್ಟಿಕ ಪುನರ್ವಸತಿ ಕೇಂದ್ರ (ಎನ್.ಆರ್.ಸಿ) ಗಳ ಸ್ಥಾಪನೆ.
- ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ 0–6 ವರ್ಷದ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಅವಶ್ಯವಿದ್ದಲ್ಲಿ ಹತ್ತಿರದ ಪೌಷ್ಟಿಕ ಪುನರ್ವಸತಿ ಕೇಂದ್ರ (ಎನ್.ಆರ್.ಸಿ) ದಲ್ಲಿ ಸರ್ಕಾರದ ಖರ್ಚಿನಲ್ಲಿ ಸಂಪೂರ್ಣ ಚಿಕಿತ್ಸೆ.
- ಚಿಕಿತ್ಸಾವಧಿಯಲ್ಲಿ ಮಗುವಿನ ತಾಯಿ/ಪೋಷಕ/ಬಂಧುವು ಅಲ್ಲೇ ಉಳಿದುಕೊಳ್ಳಲು ಅನುಕೂಲ ಮಾಡಿಕೊಡತಕ್ಕದ್ದು. ಅವರಿಗೆ ಆಹಾರವನ್ನು ಒದಗಿಸತಕ್ಕದ್ದು ಹಾಗೂ ಕನಿಷ್ಠ ವೇತನ ಅಧಿನಿಯಮ/ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಮ್.ಜಿ.ಎನ್.ಎ.ಆರ್.ಇ.ಜಿ.ಎ) ಅಡಿಯಲ್ಲಿ ನಿಗಧಿ ಪಡಿಸಿರುವ ಕನಿಷ್ಠ ವೇತನವನ್ನು ಕೊಡತಕ್ಕದ್ದು.
- ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಪ್ರತಿಯೊಂದು ಮಗುವಿನ ವಿವರಗಳನ್ನು ಆ ಮಗುವು ತೀವ್ರ ಅಪೌಷ್ಟಿಕತೆಯಿಂದ ಹೊರಬರುವವರೆಗೆ ಆನ್‌ಲೈನ್ ಉಸ್ತುವಾರಿ ಸೌಲಭ್ಯದಡಿ ನಿರ್ವಹಿಸತಕ್ಕದ್ದು.
- ರಾಜ್ಯಕ್ಕೆ ವಲಸೆ ಬಂದಿರುವ ಮತ್ತು ಕಟ್ಟಡ ಹಾಗೂ ನಿರ್ಮಾಣ ಕಾಮಗಾರಿ ಸ್ಥಳಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ನೆಲೆಸಿರುವ ಕುಟುಂಬಗಳ 0–6 ವರ್ಷ ಗುಂಪಿನಲ್ಲಿರುವ ಮಕ್ಕಳನ್ನು ತಪಾಸಿಸಲು ಅದೇ ಸ್ಥಳಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ವ್ಯವಸ್ಥೆಗೊಳಿಸತಕ್ಕದ್ದು.
- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಸ್ಥಾಪಿಸಲ್ಪಟ್ಟಿರುವ "ಸ್ನೇಹ ಕ್ಲಿನಿಕ್"ನಲ್ಲಿ ಪ್ರಾಯಪೂರ್ವ ಬಾಲಕಿಯರಿಗೆ ವೈದ್ಯಕೀಯ ಪರೀಕ್ಷಾ ಸೌಲಭ್ಯ ಮತ್ತು ವಾರದಲ್ಲಿ ಒಂದು ದಿನಕ್ಕೆ ಬದಲಾಗಿ 2 ದಿವಸ ಸ್ನೇಹ ಕ್ಲಿನಿಕ್‌ನಲ್ಲಿ ಸೇವೆಗಾಗಿ ತೆರೆದಿಡುವುದು
- ಪ್ರಾಯಪೂರ್ವ ಬಾಲಕಿಯರಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ನಿಯತಕಾಲಿಕವಾಗಿ ಕಬ್ಬಿಣಾಂಶದ (ಐ.ಎಫ್.ಎ) ಮಾತ್ರೆಗಳ ವಿತರಣೆಗಾಗಿ ಕ್ರಮ ತೆಗೆದುಕೊಳ್ಳತಕ್ಕದ್ದು.

### 2. ಪೂರಕ ಪೌಷ್ಟಿಕ ಆಹಾರ :

- ಕರ್ನಾಟಕ ಜನತೆಯ ಆಹಾರ ಪದ್ಧತಿ ಜಿಲ್ಲೆಯಿಂದ ಜಿಲ್ಲೆಗೆ ಬೇರೆ ಬೇರೆಯಾಗಿರುವುದರಿಂದ ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳಿಗೆ ಆಯಾ ಸ್ಥಳದ/ಪ್ರದೇಶ ಆಹಾರ ಪದ್ಧತಿಯನ್ನು ಆಧರಿಸಿ ಋತುವಿಗನುಗುಣವಾಗಿ ತಾಜಾ ಮತ್ತು ಬೇಯಿಸಿದ ಪೌಷ್ಟಿಕ ಆಹಾರದ ಪೂರೈಕೆ.
- ಪೂರಕ ಪೌಷ್ಟಿಕ ಆಹಾರದ ಜೊತೆಗೆ ಆಯಾ ಋತುಗಳಲ್ಲಿ ಸಿಗುವ ಹಣ್ಣುಗಳನ್ನು ಅಂಗನವಾಡಿ ಮಕ್ಕಳಿಗೆ ಕೊಡತಕ್ಕದ್ದು.
- ತೀವ್ರ ಪೌಷ್ಟಿಕತೆಗೊಳಗಾಗಿರುವ ಮಕ್ಕಳ ಕುಟುಂಬಗಳಿಗೆ ಅಂತ್ಯೋದಯ/ ಬಿ.ಪಿ.ಎಲ್. ಪಡಿತರ ಚೀಟಿಯ ನೀಡಿಕೆ.

### 3. ಮಾಹಿತಿ, ಶಿಕ್ಷಣ ಹಾಗೂ ಸಂವಹನದ (ಐ.ಇ.ಸಿ) ಮೂಲಕ ಅರಿವು :

- ಅಪೌಷ್ಟಿಕತೆಗೆ ಕಾರಣಗಳು ಮತ್ತು ಅದರ ಪರಿಣಾಮಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ಜ್ಞಾನವನ್ನು ಹೊಂದಿರುವ ಹಾಗೂ ಸ್ಥಳೀಯ ಭಾಷೆಯಲ್ಲಿ ಪ್ರಸ್ತುತಪಡಿಸುವ ಮತ್ತು ಸಂವಹನ ಕೌಶಲ್ಯಗಳನ್ನು ಹೊಂದಿರುವ ಸ್ವಯಂಸೇವಕರ ಗುಂಪುಗಳನ್ನು ಸ್ಥಾಪಿಸಬೇಕು.